ನಿಜವಾಗಿಯೂ ನಮ್ಮದೇ?' 'ಭಾಷೆಯಲ್ಲಿ ಬದಲಾವಣೆ', 'ಭಾಷಾ ವೈವಿಧ್ಯವನ್ನೇಕೆ ಕಾಯ್ದುಕೊಳ್ಳಬೇಕು' ಮುಂತಾದ ಪ್ರಬಂಧಗಳಲ್ಲಿ ಅವರು ವಿವರವಾಗಿ ಈ ಕುರಿತು ಚರ್ಚಿಸಿದ್ದಾರೆ. ಕನ್ನಡ ಜಗತ್ತು ಅರ್ಧಶತಮಾನ ಕೃತಿಯಲ್ಲಿಯೂ ಕೂಡ ಭಾಷೆಯ ಪರಿವರ್ತನಾಶೀಲ ಗುಣದ ಬಗ್ಗೆ ವಿವರಿಸಿದ್ದಾರೆ.

'ಹೀಗಲ್ಲದೆ ಭಾಷೆ ನಿರಂತರ ಪರಿವರ್ತನೆಯನ್ನು ಹೊಂದುವುದರಿಂದ ತಟ್ಟನೇ ಅದರಲ್ಲಾಗುವ ಬದಲಾವಣೆಗಳು ಗೋಚರಿಸದಿದ್ದರೂ ಎಷ್ಟೋ ಶತಮಾನಗಳ ನಂತರ ಮೂಲಭಾಷೆಯ ಲಕ್ಷಣಗಳು ಸಂಪೂರ್ಣ ಬೇರೆ ಎಂಬಂತೆ ಆಗಿಬಿಡುತ್ತವೆ. ಇಂತಹ ಪ್ರಸಂಗಗಳನ್ನು ಯಾರೂ ಭಾಷಾನಾಶ ಎನ್ನುವುದಿಲ್ಲ. ಕನ್ನಡವು ಹೀಗೆ ನಿರಂತರವಾಗಿ ಬದಲಾಗುತ್ತಿದೆ. ಆ ಬದಲಾವಣೆಯ ಪರಿಣಾಮವಾಗಿ ಮುಂದೆಯೂ ಕನ್ನಡ ಇದ್ದೇ ಇರುತ್ತದೆ. ಮೊದಲೇ ಹೇಳಿದಂತೆ ಅದು ಗುರುತು ಹಿಡಿಯಲು ಸಾಧ್ಯವಾಗದಷ್ಟು ಬೇರೆಯ ಆಕಾರವನ್ನು ಪಡೆಯಬಹುದು. ಹೀಗೆ ಮೂಲ ಆಕಾರ ಕಳೆದು ಹೋಗುವುದಕ್ಕೆ ಆತಂಕ ವ್ಯಕ್ತಪಡಿಸುವುದು ಅಷ್ಟೇನು ಸರಿಯಾದ ಪ್ರತಿಕ್ರಿಯೆಯಲ್ಲ. ಏಕೆಂದರೆ ಒಂದು ಭಾಷೆ ಹೀಗೆ ಬೇರೆ ಬೇರೆ ಆಕಾರಗಳನ್ನು ಪಡೆಯುವುದು ಅದರ ಜೈವಿಕತೆಯ ಲಕ್ಷಣವಾಗಿದೆ.'

(ಕೆ.ವಿ. ನಾರಾಯಣ: ಕನ್ನಡ ಜಗತ್ತು ಅರ್ಧ ಶತಮಾನ 2007)

ಹೀಗೆ ಒಂದು ಕಡೆ ಕನ್ನಡ ತನ್ನದನ್ನು ಅಷ್ಟಿಷ್ಟು ಕಳೆದುಕೊಳ್ಳುತ್ತ ಇದೆ ಮತ್ತು ಇನ್ನೊಂದೆಡೆ ಅನ್ಯವನ್ನು ತನ್ನದನ್ನಾಗಿಸಿಕೊಂಡು ಬೆಳೆಯುತ್ತಲೂ ಇದೆ. ಇದು ಸಹಜ ಪ್ರಕ್ರಿಯೆಯೇ ಇರಬಹುದು. ಆದರೆ, ಯಾವುದನ್ನು ಕಳೆದುಕೊಳ್ಳಬೇಕು ಮತ್ತು ಯಾವುದನ್ನು ಉಳಿಸಿಕೊಳ್ಳಬೇಕು ಎನ್ನುವ ಬಗ್ಗೆ ಒಂದು ವಿವೇಕ, ವಿವೇಚನೆ ಬೇಕೆನಿಸುತ್ತದೆ. ಇವತ್ತು ಹಳಗನ್ನಡ, ನಡುಗನ್ನಡ ಮೂಲೆಗುಂಪಾಗುತ್ತಿವೆ. ಆ ಕನ್ನಡಗಳ ಮಹತ್ವದ ಕೃತಿಗಳು ಆಧುನಿಕ ಕನ್ನಡದಲ್ಲಿ ಮರುಹುಟ್ಟು ಪಡೆಯಲಿಲ್ಲ. ಕನ್ನಡ ಮಾತನಾಡುವ ನಮ್ಮ ಮಕ್ಕಳಿಗೆ ಕೂಡ ಕನ್ನಡದ ಲಿಪಿ ದೂರವಾಗುತ್ತಿದೆ. ಇದು ಬೇಸರದ ಸಂಗತಿ. ಒಂದು ವೈಯಕ್ತಿಕ ಅನುಭವದೊಂದಿಗೆ ಇದನ್ನು ಹೇಳುತ್ತೇನೆ.

ನಿಮಗೆಲ್ಲ ಗೊತ್ತಿರಬಹುದು, ಕೇಂದ್ರ ಸಾಹಿತ್ಯ ಅಕಾಡಮಿ ಕೊಂಕಣಿ ಕೃತಿಗಳನ್ನು ಪರಿಶೀಲಿಸಬೇಕಾದರೆ ಅವು ದೇವನಾಗರಿ ಲಿಪಿಯಲ್ಲೇ ಇರಬೇಕಾದ್ದು ಅನಿವಾರ್ಯ. ಕೆಲವು ವರ್ಷಗಳ ಹಿಂದೆ ಕೊಂಕಣಿಯನ್ನು ಶಾಲೆಗಳಲ್ಲಿ ಕಲಿಸುವುದು ಇತ್ಯಾದಿ ಸುರುವಾದಾಗ ಲಿಪಿ ಯಾವುದಿರಬೇಕು ಎನ್ನುವ ಬಗ್ಗೆ ಸಾರಸ್ವತ ಕೊಂಕಣಿಗರಲ್ಲೂ ಕ್ರಿಶ್ಚಿಯನ್ ಕೊಂಕಣಿಗರಲ್ಲೂ ಮತಭೇದ ಕಂಡುಬಂತು. ಮಂಗಳೂರಿನ ಕ್ರಿಶ್ಚಿಯನ್ ಕೊಂಕಣಿಗರು ಕನ್ನಡ ಲಿಪಿಯಲ್ಲಿ ವಿಪುಲವಾದ ಸಾಹಿತ್ಯ ರಚಿಸಿದ್ದಾರೆ. ಸಾರಸ್ವತ ಕೊಂಕಣಿಗರ ಲಿಖಿತ ಸಾಹಿತ್ಯ ಪ್ರಮಾಣದಲ್ಲಿ ಅಷ್ಟಿಲ್ಲ. ಅಂದರೆ, ಕರ್ನಾಟಕದ ಒಟ್ಟಾರೆ ಕೊಂಕಣಿ ಸಾಹಿತ್ಯ ಇರುವುದು ಕನ್ನಡ ಲಿಪಿಯಲ್ಲಿ. ಕೊಂಕಣಿಗೆ ಇದ್ದುದರಲ್ಲಿ ಮೂಲ ಲಿಪಿ ಎಂದರೆ ದೇವನಾಗರಿಯೇ. ಆದರೆ ಕರ್ನಾಟಕದಲ್ಲಂತೂ ಅದಕ್ಕೆ ಗಿರಾಕಿಗಳು ಇರಲಿಕ್ಕಿಲ್ಲ. ಹಾಗಾಗಿ ಕನ್ನಡ ಲಿಪಿ ಇರಲಿ ಎಂದು ಕೆಲವರು, ಕಲಿಕೆಯ ಹಂತಕ್ಕೆ ಬಂದಿರುವಾಗ ದೇವನಾಗರಿ ಅಳವಡಿಸಿಕೊಳ್ಳುವುದೇ ಸೂಕ್ತ ಎಂದು ಕೆಲವರು ಪಟ್ಟು ಹಿಡಿದರು. ಇದೇ ಸಮಸ್ಯೆ ತುಳುವಿಗೂ ಇದೆ. ತುಳು ಭಾಷೆ ಅಕಾಡೆಮಿಕ್ ಆಗುವಾಗ ಅದಕ್ಕೆ ತನ್ನದೇ ಲಿಪಿ ಇದೆ ಎನ್ನುವವರು ಅದನ್ನೇಕೆ ಬಿಡಬೇಕು ಎನ್ನುವ ಪ್ರಶ್ನೆ ಇಲ್ಲವೆ? ತನ್ನದೇ ಲಿಪಿಯನ್ನು ಬಿಟ್ಟುಕೊಟ್ಟು ಅದೇಕೆ ಕನ್ನಡವನ್ನು ಆತುಕೊಳ್ಳಬೇಕು? ಆದರೆ ಸದ್ಯಕ್ಕೆ ತುಳು ಭಾಷಾ